**ಸಾಕ್ಷಿಯನ್ನು ದಿಃ 19.11.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಮೃತರು ನನ್ನ ಪತಿ. ಅವರು ವಿದ್ಯಾಭ್ಯಾಸ ಮಾಡಿಲ್ಲ. ಆ ದಿನ ನನ್ನ ಯಜಮಾನರು ಚಲಾಯಿಸುತ್ತಿದ್ದ ವಾಹನ ನಮಗೆ ಸೇರಿದ್ದು. ಆರ್.ಸಿ. ನನ್ನ ಮಗನ ಹೆಸರಿನಲ್ಲಿತ್ತು. ಅದಕ್ಕೆ ವಿಮೆ ಇತ್ತು. ಅದನ್ನು ಹಾಜರು ಪಡಿಸಿಲ್ಲ. ನನ್ನ ಯಜಮಾನರಿಗೆ ಚಾಲನ ಪರವಾನಗಿ ಇತ್ತು. ಆ ದಿನ ಹೆಲ್ಮೆಟ್ ಹಾಕಿಕೊಂಡು ಮದುವೆಗೆ ಹೋಗಿದ್ದರು. ಅವರ ಡಿ.ಎಲ್ ಅನ್ನು ಹಾಜರು ಪಡಿಸಬಹುದಾ ಎಂದರೆ ಆ ದಿನ ಅವರು ತೆಗೆದುಕೊಂಡು ಹೋಗಿದ್ದು ಈಗ ಎಲ್ಲಿದೆ ಎಂದು ಗೊತ್ತಿಲ್ಲ ಎನ್ನುತ್ತಾರೆ. ನನ್ನ ಮಗ ಪೋಲೀಸರಿಗೆ ದೂರು ನೀಡಿದ್ದಾನೆ. ದೂರನ್ನು ನಮಗೆ ಅನುಕೂಲವಾಗುವಂತೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಅಪಘಾತ ಸ್ಥಳವನ್ನು ನಾನು ನೋಡಿಲ್ಲ. ನಮ್ಮ ದಾಖಲೆಗಳ ಪ್ರಕಾರ ರಸ್ತೆ 35 ಅಡಿ ಇದ್ದು ಎಡಗಡೆಯಿಂದ 10 ಅಡಿ ಒಳಕ್ಕೆ ಅಪಘಾತ ಆಗಿದೆ ಎಂದರೆ ಸಾಕ್ಷಿಯು ಪೋಲೀಸರು ಎದುರುದಾರರು ವಾಹನದ ಲೈಟ್ ಹಾಕದೇ ರಸ್ತೆಯ ಮಧ್ಯದಲ್ಲಿ ನಿಲ್ಲಿಸಿದ್ದು ನನ್ನ ಯಜಮಾನರು ಟ್ರಾಕ್ಟರ್ ನ ಹಿಂದೆ ಡಿಕ್ಕಿ ಪಡಿಸಿದ್ದಾರೆ ಎನ್ನುತ್ತಾರೆ. ಟ್ರಾಕ್ಟರ್ ನಿಂತಿತ್ತು ಎಂದರೆ ಸರಿ. ನನ್ನ ಯಜಮಾನರಿಗೆ ಡಿ.ಎಲ್ ಇಲ್ಲದೇ ವಾಹನ ಚಾಲನೆ ಮಾಡಲು ಬರದೇ ಅಜಾಗರೂಕತೆಯಿಂದ ಚಲಾಯಿಸಿ ಅವರ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ನನ್ನ ಯಜಮಾನರಿಗೆ 59 ವರ್ಷ ವಯಸ್ಸಾಗಿತ್ತು ಎಂದರೆ ನನ್ನ ಯಜಮಾನರು 1969 ರಲ್ಲಿ ಹುಟ್ಟಿರುತ್ತಾರೆ ಎನ್ನುತ್ತಾರೆ. ನನ್ನ ಯಜಮಾನರಿಗೆ ಆಧಾರ್ ಕಾರ್ಡ್ ಮತ್ತು ಚುನಾವಣಾ ಗುರುತಿನ ಚೀಟಿ ಇದೆ. ಸದರಿ ಕಾರುಗಳು ನಮ್ಮ ಮನೆಯಲ್ಲಿ ಇದೆ. ಅದನ್ನು ಹಾಜರು ಪಡಿಸಲು ತೊಂದರೆ ಇಲ್ಲ. ಈಗ ನನಗೆ ತೋರಿಸುತ್ತಿರುವ ದಾಖಲೆ ನನ್ನ ಯಜಮಾನರ ಆಧಾರ್ ಕಾರ್ಡ್ ನ ಪ್ರತಿ ಎಂದರೆ ಸರಿ. ಅದರಲ್ಲಿ ಅವರ ಜನ್ಮ ವರ್ಷ 1966 ಎಂದು ಇದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಗುರುತಿಸಿದ ಆಧಾರ್ ಕಾರ್ಡ್ ನ ಪ್ರತಿಯನ್ನು ಗುರುತಿಸುವಿಕೆಯ ಕಾರಣಕ್ಕಾಗಿ ನಿಆರ್. 1 ಎಂದು ಗುರುತಿಸಲಾಯಿತು.

2. ನನ್ನ ಯಜಮಾನರಿಗೆ ವಯಸ್ಸಾದ ಕಾರಣ ಸರಿಯಾಗಿ ಕಣ್ಣು ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ನನ್ನ ಯಜಮಾನರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಮಗೆ ಜಮೀನು ಇರುವ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ಆದ ಕಾರಣ ವ್ಯವಸಾಯದಿಂದ ಆದಾಯ ಬರುತ್ತಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೆ ನನ್ನ ಯಜಮಾನರ ತಪ್ಪು ಕಾರಣ ಆದ ಕಾರಣ 2 ನೇ ಎದುರುದಾರರು ಪರಿಹಾರ ಕೊಡಲು ಭಾದ್ಯರಲ್ಲ ಎಂದರೆ ಸರಿಯಲ್ಲ.

1 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.